**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.**

**ಎಸ್.ಸಿ. 4/2026**

1. ಯಾದಗಿರಿ ಗ್ರಾಮೀಣ ಪೊಲೀಸಠಾಣೆ ....ಫಿರ್ಯಾದಿ

ವಿರುದ್ಧ

1. ಶರಣಪ್ಪ .....ಆರೋಪಿ

# ದೋಷಾರೋಪಣೆ

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ಶರಣಪ್ಪ ತಂದೆ ಹಣಮಂತ ದುಗನೂರ, ವಯಸ್ಸುಃ 30 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ದುಗನೂರ ಕ್ಯಾಂಪ ಹತ್ತಿಕುಣಿ, ತಾಃಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಆರೋಪಿಯಾದ ನೀನು ಚಾಸಾ-1 ರವರನ್ನು ಮದುವೆ ಆಗಿದ್ದು ವೈವಾಹಿಕ ಜೀವನದಿಂದಾಗಿ ಕುಮಾರಿ ಸಾನ್ವಿ ಭಾರ್ಗವ ಹಾಗೂ ಹೇಮಂತ ಎನ್ನುವ ಮೂರು ಮಕ್ಕಳು ಜನಿಸಿದ್ದು, ಸುಮಾರು 3 ವರ್ಷಗಳಿಂದ ಫಿರ್ಯಾದಿಯ ಮೇಲೆ ವಿನಾಃ ಕಾರಣ ಸಂಶಯ ಪಡುತ್ತಾ ಫಿರ್ಯಾದಿ ಯಾರೊಂದಿಗಾದರೂ ಮಾತಾನಾಡಿದರೆ ಅವರ ಜೊತೆ ನೀನು ಅನೈತಿಕ ಸಂಬಂಧ ಹೊಂದಿರುತ್ತೀ ಅಂತಾ ಫಿರ್ಯಾದಿದಾರರೊಂದಿಗೆ ಕಿರಿಕಿರಿ ಮಾಡುತ್ತಾ ನಿನಗೆ ಹುಟ್ಟಿದ ಮೂರು ಜನ ಮಕ್ಕಳು ನನಗೆ ಹುಟ್ಟಿಲ್ಲ, ಯಾರಿಗೆ ಹುಟ್ಟಿದ್ದಾರೆ ಹೇಳು ಅಂತಾ ಹೊಡೆಬಡೆ ಮಾಡುತ್ತಿದ್ದು, ಈ ವಿಷಯವನ್ನು ಚಾಸಾ-1 ರವರು ಚಾಸಾ-17, 18, 19 ರವರಿಗೆ ತಿಳಿಸಿದಾಗ ಗಂಡ, ಹೆಂಡತಿ ಜಗಳ ಬರುತ್ತೆ, ಹೋಗುತ್ತೆ ಎಂದು ಮಕ್ಕಳ ಮುಖ ನೋಡಿಕೊಂಡು ಹೋಗಬೇಕು ಅಂತಾ ತಿಳುವಳಿಕೆ ಹೇಳಿದ್ದು, ಆದರು ಸಹ ಆರೋಪಿ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, ದಿಃ 24.09.2025 ರಂದು ಸಾನ್ವಿ ಭಾರ್ಗವ, ಹೇಮಂತ ಇವರು ಗುದನೂರು ಕ್ಯಾಂಪಿನಲ್ಲಿ ಬರುವ ಹೊಲ ಸರ್ವೆ ನಂಬರ 206 ರಲ್ಲಿ ನಿರ್ಮಾಣದ ಹಂತದ ಮನೆಯ ಮುಂದುಗಡೆ ಟಿನ ಶೆಡನಲ್ಲಿ ಸಾನ್ವಿ ಮತ್ತು ಭಾರ್ಗವ ಇವರು ಚಾಸಾ-12

ರವರೊಂದಿಗೆ ಮಂಚದ ಮೇಲೆ ಮಲಗಿಕೊಂಡಿದ್ದು, ಹೇಮಂತ ಇವರು ಹೊರಸಿನ ಮೇಲೆ ಮಲಗಿಕೊಂಡಿದ್ದು, ಬೆಳಗಿನ ಜಾವ 6.00-6.30 ರ ಸುಮಾರು ಆರೋಪಿತಯಾದ ನೀನು ಕೊಡಲಿಯಿಂದ ಸಾನ್ವಿ ಮತ್ತು ಭಾರ್ಗವ ಇವರ ಕುತ್ತಿಗೆಗೆ ಹೊಡೆದು ಕೊಲೆ ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ. 103(1) ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತಯಾದ ನೀನು ಹೊರಸಿನ ಮೇಲೆ ಮಲಗಿದಂತಹ ಹೇಮಂತನಿಗೆ ಕೊಲೆ ಮಾಡುವ ಉದ್ದೇಶದಿಂದ ಕೊಡಲೆಯಿಂದ ಬೆನ್ನಿಗೆ ಹೊಡೆದು ಭಾರಿರಕ್ತಗಾಯವಾಗಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ. 109 ಮತ್ತು 118(2) ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 23.03.2026 ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಯಾದಗಿರಿ.